ಓ.ಎಸ್. ನಂಃ **141/2023**
<u>ಪಿಡಬ್ಲ್ಯೂಃ **1**</u>

ದಿನಾಂಕಃ 20-06-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎನ್.ಆರ್.ಕೆ ವಕೀಲರಿಂದಃ</u>

1. ನಿಮ್ಮ ತಂದೆ ಆರೋಗ್ಯವಾಗಿ ಇದ್ದಾರೆ ಎಂದರೆ ಸಾಕ್ಷಿಯು ಅವರಿಗೆ ಕಿವಿ ಕೇಳಿಸುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಇದೆ ದಾವೆಯಲ್ಲಿ ದಿಃ 12.03.2025 ರಂದು ನ್ಯಾಯಾಲಯದಲ್ಲಿ ಹಾಜರಾಗಿ ತಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಆರೋಗ್ಯವಾಗಿ ಇದ್ದಾರೆ, ಅವರಿಗೆ ಕಿವಿ ಸರಿಯಾಗಿಯೇ ಕೇಳಿಸುತ್ತದೆ ಹಾಗೂ ಹೊಲದಲ್ಲಿ ಕೆಲಸ ಸಹ ಮಾಡುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಈದಿನ ನ್ಯಾಯಾಲಯಕ್ಕೂ ಸಹ ಬಂದಿದ್ದಾರೆ ಎಂದರೆ ಸರಿಯಲ್ಲ. ನಿಮ್ಮ ತಂದೆ ಆರೋಗ್ಯವಾಗಿದ್ದರೂ ಸಹ ನ್ಯಾಯಾಲಯದಲ್ಲಿ ಬಂದು ಸಾಕ್ಷ ನುಡಿಯುವುದರಿಂದ ಸತ್ಯಂಶ ಗೊತ್ತಾಗುತ್ತದೆ ಎಂದು ನನಗೆ ಅಧಿಕಾರ ಪತ್ರ ಬರೆದುಕೊಟ್ಟಿದ್ದಾರೆ ಎಂದರ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರಿಗೆ ಕಳೆದ 20 ವರುಷಗಳಿಂದ ಕಿವಿ ಸರಿಯಾಗಿ ಕೇಳಿಸುವುದಿಲ್ಲ ಎಂದು ನುಡಿಯುತ್ತಾರೆ.

2. ಪ್ರತಿವಾದಿ ದಾವಾ ಜಮೀನನ್ನು ಅತೀಕ್ರಮಣ ಮಾಡುತ್ತಿರುವುದರಿಂದ ನನ್ನ ತಂದೆ ಈ ದಾವೆ ದಾಖಲು ಮಾಡಿದ್ದಾರೆ. ಪ್ರತಿವಾದಿ ದಾವಾ ಜಮೀನಿನ ಪೂರ್ವಕ್ಕೆ ಜಮೀನು ಹೊಂದಿದ್ದಾರೆ. ಪ್ರತಿವಾದಿ ದಾವಾ ಜಮೀನು ಅತೀಕ್ರಮಣ ಮಾಡುತ್ತಿದ್ದಾರೆ ಎಂಬುದಾಗಿ ವಾದ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ಆ ರೀತಿ ಅತೀಕ್ರಮಣ ಮಾಡುತ್ತಿದ್ದಾರೆ ಎಂದು ನಾನು ಪೋ. ಠಾಣೆಗೆ ದೂರು ನೀಡಿದ್ದೆನು. ಈಗ ಎರಡು ವರುಷಗಳ ಹಿಂದೆ ದೂರು ನೀಡಿದ್ದೆನು. ಆ ಪೋಲಿಸರು ಪ್ರತಿವಾದಿಗೆ ಪಹಣಿ ವಾದಿಯ ಹೆಸರಿನಲ್ಲಿ ಇರುವುದರಿಂದ ನೀನು ದಾವಾ ಜಮೀನು ಸಾಗುವಳಿ ಮಾಡಲು ಹೋಗಬೇಡ ಎಂದು ಹೇಳಿದ್ದರು. ಆದರೂ ಸಹ ಪ್ರತಿವಾದಿ ನಾನು ಹೊಲ ಬಿಡುವುದಿಲ್ಲ ಎಂದು ಹೇಳಿ ಪದೇ ಪದೇ ಕಿರಿಕಿರಿ ಮಾಡಿದ್ದರಿಂದ ದಾವೆ ದಾಖಲು ಮಾಡಿದ್ದೆನು.

3. 2014 ರಲ್ಲಿ ನನ್ನ ತಂದೆ ಕುಟುಂಬದ ಅಡಚಣೆಗಾಗಿ ದಾವಾ ಜಮೀನನ್ನು ಪ್ರತಿವಾದಿಗೆ ರೂ.50 ಸಾವಿರ ಮೊತ್ತಕ್ಕೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಆ ಪ್ರಕಾರ ದಿಃ 11.07.2014 ರಂದು ನನ್ನ ತಂದೆ ಖರೀದಿ ಒಪ್ಪಂದ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ರೂ.50 ಸಾವಿರ ಖರೀದಿ ಪ್ರತಿಫಲ ಹಣ ಪಡೆದುಕೊಂಡು ಒಪ್ಪಂದ ಪತ್ರಕ್ಕೆ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಶಂಕ್ರಪ್ಪ ತಂದೆ ನಾಗಪ್ಪ ಎಂಬುವವರ ಪರಿಚಯ ಇದೆಯೇ ಎಂದರೆ ಸಾಕ್ಷಿಯು ಆತ ನಮ್ಮ ಗ್ರಾಮದವರು ಆಗಿರುತ್ತಾರೆ ಎಂದು ನುಡಿಯುತ್ತಾರೆ. ನಿಂಗಪ್ಪ ನಾಂದವಾರ್ ರವರ ಪರಿಚಯ ಇದೆಯೇ ಎಂದರೆ ಸಾಕ್ಷಿಯು ಆತ ಸಹ ನಮ್ಮ ಗ್ರಾಮದವರು

ಆಗಿರುತ್ತಾರೆ ಆದರೆ ನನಗೆ ಪರಿಚಯ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಗ್ರಾಮದಲ್ಲಿ ನಿಮ್ಮ ಸಮಾಜಕ್ಕೆ ಸೇರಿದ ಮೂಡಲ ಎಂಬ ಒಂದು ಕುಟುಂಬ ಇದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಖರೀದಿ ಒಪ್ಪಂದ ಪತ್ರಕ್ಕೆ ಸದರಿ ಶಂಕ್ರಪ್ಪ, ನಿಂಗಪ್ಪ ಹಾಗೂ ಮೂಡಲ ಸಾಬಣ್ಣ ರವರು ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ಒಂದು ವರುಷ್ವ ಅವದಿಯಲ್ಲಿ ನಮೂನೆ-10 ನ್ನು ತಯಾರಿಸಿಕೊಂಡು ಖರೀದಿ ಪತ್ರ ಮಾಡಿಕೊಡುವುದಾಗಿ ಒಪ್ಪಿ ಕೊಂಡಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿ ಒಪ್ಪಂದ ಪತ್ರದಂತೆ ಖರೀದಿ ಪತ್ರ ಮಾಡಿಕೊಡುವಂತೆ ಕೇಳಿದರೂ ಸಹ ನನ್ನ ತಂದೆ ಖರೀದಿ ಪತ್ರ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಪ್ರತಿವಾದಿ ನಿಮ್ಮ ತಂದೆಯ ವಿರುದ್ಧ ನಿರ್ದಿಷ್ಟ ಕರಾರು ಪಾಲನೆಗಾಗಿ ಯಾದಗಿರಿಯ ಮಾನ್ಯ ಅದೀಕ ದಿವಾಣಿ ನ್ಯಾಯಾಲಯದಲ್ಲಿ ದಾವೆ ನಂ.210/2023 ನ್ನು ದಾಖಲಿಸಿದ್ದಾರೆ ಎಂದರೆ ಸಾಕ್ಷಿಯು ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ ಯಾವುದೇ ತಂಟೆ-ತಕರಾರು ಮಾಡಿಲ್ಲ, ಹೊರತು ಖರೀದಿ ಪತ್ರ ಮಾಡಿಕೊಡುವಂತೆ ಕೇಳಿದಾಗ ನಾವು ಈ ಸುಳ್ಳು ದಾವೆ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನಾವು ಪ್ರತಿವಾದಿಗೆ ವಿನಾಕಾರಣ ತೊಂದರೆ ಕೊಡಲು ಈ ಸುಳ್ಳು ದಾವೆ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ಸಾಕ್ಷಿ ಹೇಳಿಕೆಯನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ